# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 670 |
| ಮಾನ್ಯ ಸದಸ್ಯರ ಹೆಸರು | : | ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ವಿಷಯ | : | ಪ್ರವಾಸೋದ್ಯಮ ಇಲಾಖೆಯ ಯೋಜನೆಗಳ ಕುರಿತು. |
| ಉತ್ತರಿಸುವ ದಿನಾಂಕ | : | 22.07.2019. |
| ಉತ್ತರಿಸುವ ಸಚಿವರು | : | ಮಾನ್ಯ ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (1) | (2) | (3) |
| ಅ) | ಪ್ರವಾಸೋದ್ಯಮ ಇಲಾಖೆಯಲ್ಲಿ ಅನುಷ್ಠಾನಗೊಳಸುತ್ತಿರುವ ಯೋಜನೆಗಳಾವುವು; (ಮಾಹಿತಿ ನೀಡುವುದು) | ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳ ವಿವರ ಕೆಳಗಿನಂತಿದೆ.<br>1. ರಾಜ್ಯದಲ್ಲಿರುವ 20 ಪಮುಖ ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿ ಯೋಜನೆ.<br>2. ಕರ್ನಾಟಕ ಟೂರಿಸಂ ವಿಷನ್ ಗ್ರೂಪ್ ಶಿಫಾರಸ್ಸುಗಳ ಅನುಷ್ಠಾನ.<br>3. ಯಾತ್ರಿನಿವಾಸ, ಡಾರ್ಮಿಟರಿ, ಪ್ರವಾಸಿ ಮೂಲಸೌಲಭ್ಯಗಳ ಅಭಿವೃದ್ಧಿ, ರಸ್ತೆ ಅಭಿವೃದ್ಧಿ.<br>4. ಪ್ರವಾಸೋದ್ಯಮ ಉತ್ತೇಜನ.<br>5. ಪ್ರವಾಸೋದ್ಯಮ ನೀತಿಯ ಪ್ರಕಾರ ಹೋಟೆಲ್ ಯೋಜನೆಗಳಿಗೆ ಸಹಾಯಧನ ವಿತರಣೆ ಮುಂತಾದ ಯೋಜನೆ.<br>6. ಸರ್ಕಾರಿ ಪ್ರೌಢಶಾಲಾ ಮಕ್ಕಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮ ಏರ್ಪಡಿಸುವುದು.<br>7. ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಯೋಜನೆ ಅಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ಹಾಗೂ ಸಾಮಾನ್ಯ ಯೋಜನೆ ಅಡಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿಗಳ ವಿತರಣೆ ಕಾರ್ಯಕ್ರಮ.. |
| ಆ) | ವಿದ್ಯಾವಂತ ನಿರುದ್ಯೋಗಿಗಳಿಗೆ ಇಲಾಖಾ ವತಿಯಿಂದ ಟೂರಿಸ್ಟ್ ಟ್ಯಾಕ್ಸಿ ನೀಡಲಾಗುತ್ತಿರುವ ಸಹಾಯಧನದ ಮೊತ್ತವೆಷ್ಟು; ಇದಕ್ಕೆ ಅನುಸರಿಸುತ್ತಿರುವ ಮಾನದಂಡಗಳೇನು; | ಪ್ರವಾಸೋದ್ಯಮ ಇಲಾಖೆ ವತಿಯಿಂದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ಸ್ವ-ಉದ್ಯೋಗ ಕಲ್ಪಿಸಿಕೊಳ್ಳಲು ಪ್ರವಾಸಿ ಟ್ಯಾಕ್ಸಿ ಖರೀದಿಸಲು ತಲಾ ರೂ.3.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.<br><br>ಸದರಿ ಪ್ರವಾಸಿ ಟ್ಯಾಕ್ಸಿ ಸಹಾಯಧನ ಪಡೆಯಲು ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ವಯ ಕ್ರಮವಹಿಸಲಾಗುತ್ತಿದೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ |

(2...

<table>
<tr><th>ಕ್ರ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(1)</td><td>(2)</td><td>(3)</td></tr>
<tr><td>ಇ)</td><td>ಕಳೆದ ಮೂರು ವರ್ಷಗಳಿಂದ ಎಷ್ಟು ಜನ ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿ ಸೌಲಭ್ಯವನ್ನು ಕಲ್ಪಿಸಲಾಗಿದೆ? (ವಿವರಗಳನ್ನು ನೀಡುವುದು)</td><td>ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ಪ್ರವಾಸಿ ಟ್ಯಾಕ್ಸಿ ಖರೀದಿಸಲು ಸಹಾಯಧನ ಪಡೆದ ವರ್ಷವಾರು ವಿವರ ಕೆಳಗಿನಂತಿದೆ.
<table>
<tr><th>ವರ್ಷ</th><th>ಪ.ಜಾ</th><th>ಪ.ಪಂ.</th><th>ಓ.ಬಿ.ಸಿ & ಎಂ</th><th>ಒಟ್ಟು</th></tr>
<tr><td>2016-17</td><td>657</td><td>143</td><td>1648</td><td>2448</td></tr>
<tr><td>2017-18</td><td>489</td><td>181</td><td>575</td><td>1245</td></tr>
<tr><td>2018-19</td><td>152</td><td>50</td><td>132</td><td>334</td></tr>
<tr><td>ಒಟ್ಟು</td><td>1298</td><td>374</td><td>2355</td><td>4027</td></tr>
</table>
ಕಳೆದ ಮೂರು ವರ್ಷಗಳಲ್ಲಿ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ಪ್ರವಾಸಿ ಟ್ಯಾಕ್ಸಿ ಖರೀದಿಸಲು ಸಹಾಯಧನ ಪಡೆದ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಿದೆ.</td></tr>
</table>

ಪ್ರಇ 27 ಪ್ರವಾವಿ 2019

(ಸಾ.ರಾ.ಮಹೇಶ್)

ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು

# ವಿಧಾನ ಪರಿಷತ್ತಿನ ಪ್ರಶ್ನೆ ಸಂಖ್ಯೆ: 670 ಕ್ಕೆ ಅನುಬಂಧ-1

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪ್ರವಾಸಿ ಟ್ಯಾಕ್ಸಿ ವಿತರಣೆ ಯೋಜನೆಯಡಿಯಲ್ಲಿ ನೀಡುವ ಸಹಾಯಧನವನ್ನು ಹೆಚ್ಚಳ ಮಾಡಲು ಮಂಜೂರಾತಿ.

ಓದಲಾಗಿದೆ: ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆರವರ ಪತ್ರ

ಸಂಖ್ಯೆ: ಪ್ರಇ/ಯೋ-1/01/2017-18

ಕರ್ನಾಟಕ ಸರ್ಕಾರ ಪ್ರವಾಸೋದ್ಯಮ ಇಲಾಖೆ 153 22 APR 2017

....

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ, ಪ್ರವಾಸೋದ್ಯಮ ನಿರ್ದೇಶಕರು ಬೆಂಗಳೂರುರವರು SCP/TSP ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಹಾಗೂ ಸಾಮಾನ್ಯ ಯೋಜನೆಯಡಿಯಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ನಿರುದ್ಯೋಗಿ ಅಭ್ಯರ್ಥಿಗಳು ಸ್ವ-ಉದ್ಯೋಗ ಕಲ್ಪಿಸಿಕೊಳ್ಳಲು ತಲಾ ರೂ.2.00 ಲಕ್ಷಗಳ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿಗಳನ್ನು 2016-17ನೇ ಸಾಲಿನವರೆಗೆ ವಿತರಿಸಲು ಕ್ರಮವಹಿಸಲಾಗಿದೆ ಎಂದು ತಿಳಿಸಿರುತ್ತಾರೆ.

2017-18ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆ ಅಡಿ ಪ್ರವಾಸೋದ್ಯಮ ಇಲಾಖೆಗೆ ರೂ.28.59 ಕೋಟಿಗಳನ್ನು ಒದಗಿಸಲಾಗಿದೆ.[ಪರಿಶಿಷ್ಟ ಜಾತಿ ಉಪಯೋಜನೆ ರೂ.20.18 ಕೋಟಿಗಳು, ಪರಿಶಿಷ್ಟ ಪಂಗಡ ಉಪಯೋಜನೆ ರೂ.8.41 ಕೋಟಿಗಳು]

ಸಮಾಜಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ, 2017-18ನೇ ಸಾಲಿನ ಮುಖ್ಯಮಂತ್ರಿಗಳ ಬಜೆಟ್ ಭಾಷಣದ ಕಂಡಿಕೆ-172ರಲ್ಲಿ ಕೆಳಗಿನಂತೆ ಘೋಷಿಸಲಾಗಿದೆ ಎಂದು ತಿಳಿಸಿರುತ್ತಾರೆ.

"ವಾಹನಾ ಚಾಲನಾ ಪರವಾನಗಿ ಹೊಂದಿರುವ 3500 ಪರಿಶಿಷ್ಟ ಜಾತಿ ಮತ್ತು 1500 ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿಗಳನ್ನು ಖರೀದಿಸಲು 3 ಲಕ್ಷ ರೂ.ಗಳವರೆಗೆ ಅಥವಾ ವಾಹನದರ ಶೇ.50 ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನ ನೀಡಲಾಗುವುದು. ಉಳಿದ ಮೊತ್ತವನ್ನು ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಪಡೆಯಬಹುದು"

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ SCP/TSP ಯೋಜನೆ ಹಾಗೂ ಸಾಮಾನ್ಯ ಯೋಜನೆಯಡಿಯಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ವಿತರಿಸುತ್ತಿರುವ ಪ್ರವಾಸಿ ಟ್ಯಾಕ್ಸಿಗಳ ಸಹಾಯಧನವನ್ನು ರೂ.2.00 ಲಕ್ಷಗಳಿಂದ ರೂ.3.00 ಲಕ್ಷಗಳಿಗೆ ಹೆಚ್ಚಳ ಮಾಡಲು ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಪ್ರಇ 188 ಪ್ರವಾಯೋ 2017 ದಿನಾಂಕ:20-4-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 2017-18ನೇ ಸಾಲಿನಿಂದ SCP/TSP ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಹಾಗೂ

..2

ಸಾಮಾನ್ಯ ಯೋಜನೆಯಡಿಯಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ನಿರುದ್ಯೋಗಿ ಅಭ್ಯರ್ಥಿಗಳು ಸ್ವ-ಉದ್ಯೋಗ ಕಲ್ಪಿಸಿಕೊಳ್ಳುವ ಸಲುವಾಗಿ ರೂ.3.00 ಲಕ್ಷ(ರೂಪಾಯಿ ಮೂರು ಲಕ್ಷಗಳು ಮಾತ್ರ)ಗಳ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಸದರಿ ವೆಚ್ಚಕ್ಕೆ ತಗಲುವ ವೆಚ್ಚವನ್ನು 2017-18ನೇ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆ ಅಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆದೇಶ ಸಂಖ್ಯೆ ಎಫ್.ಡಿ. 03 ಟಿ.ಎಫ್.ಪಿ.2015 ದಿ:2-4-2016ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಕೆ. ರವಿಮೂರ್ತಿ)
ಸರ್ಕಾರದ ಅಪರ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಇವರಿಗೆ:

1. ಮಹಾಲೇಖಪಾಲರು(ಲೆಕ್ಕಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಖನಿಜ ಭವನ, ಬೆಂಗಳೂರು.
3. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಕೆ.ಆರ್.ವೃತ್ತ, ಬೆಂಗಳೂರು.
4. ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ: 1) ಮಾನ್ಯ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರ ಆಪ್ತಕಾರ್ಯದರ್ಶಿ.

2) ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಇವರಿಗೆ - ಮಾಹಿತಿಗಾ

ಅನುಬಂಧ-1

ಕರ್ನಾಟಕ ಸರ್ಕಾರ

ಸಂಖ್ಯೆ: ಪ್ರಇ 47 ಪ್ರವಾಯೋ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:06.02.2017

## ತಿದ್ದುಪಡಿ ಆದೇಶ

2016-17ನೇ ಸಾಲಿನಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ವಿತರಿಸಲು ಮಂಜೂರಾತಿ ನೀಡಿ ಹೊರಡಿಸಲಾಗಿರುವ ಆದೇಶ ಸಂಖ್ಯೆ:ಪ್ರಇ 297 ಪ್ರವಾಯೋ 2016, ದಿನಾಂಕ:02.11.2016ರ ಅನುಬಂಧ-1ರಲ್ಲಿನ ಆಯ್ಕೆ ವಿಧಾನದ ಕ್ರಮ ಸಂಖ್ಯೆ3ರಲ್ಲಿ "ಮಹಿಳೆಯರಿಗೆ ಶೇ.10ರಷ್ಟು ಗುರಿಗಳನ್ನು ಮೀಸಲಿರಿಸುವುದು" ಎಂಬುದರ ಬದಲಿಗೆ "ಮಹಿಳೆಯರಿಗೆ ಶೇ.15ರಷ್ಟು ಗುರಿಗಳನ್ನು ಮೀಸಲಿರಿಸುವುದು" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

[ಬಿ.ಎನ್.ಯತಿರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ.

ಇವರಿಗೆ,

1. ಮಹಾಲೇಖಪಾಲರು (ಲೆಕ್ಕ ಮತ್ತು ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.
3. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಖನಿಜ ಭವನ, ಬೆಂಗಳೂರು.
4. ಜಿಲ್ಲಾ ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ.
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಕೆ.ಆರ್.ವೃತ್ತ, ಬೆಂಗಳೂರು-01.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಮಾನ್ಯ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ.
2. ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದ ನಿರುದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸುವ ಸಂಬಂಧ ಮಾರ್ಗಸೂಚಿಗಳು

ಓದಲಾಗಿದೆ: ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆರವರ ಕಡತ ಸಂಖ್ಯೆ: ಪ್ರಇ/ಯೋ-1/26/2016-17

....

ಪ್ರಸ್ತಾವನೆ:

ಮೇಲೆ ಓದಲಾದ ಕಡತದಲ್ಲಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆರವರು 2016-17ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ನಿರುದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಡಲು, ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ವಿತರಿಸುವ ಸಂಬಂಧ ಸಿದ್ಧಪಡಿಸಿರುವ ಪರಿಷ್ಕೃತ ಮಾರ್ಗಸೂಚಿಗಳಿಗೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ

ಸರ್ಕಾರದ ಆದೇಶ ಸಂಖ್ಯೆ:ಪ್ರಇ 243 ಪ್ರವಾಯೋ 2016 ದಿನಾಂಕ:8-9-2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2016-17ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ನಿರುದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಡಲು, ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ವಿತರಿಸುವ ಸಂಬಂಧ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿನ ಪರಿಷ್ಕೃತ ಮಾರ್ಗಸೂಚಿಗಳಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎನ್.ಯತಿರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಇವರಿಗೆ:

1. ಮಹಾಲೇಖಪಾಲರು(ಲೆಕ್ಕಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಖನಿಜ ಭವನ, ಬೆಂಗಳೂರು.
3. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ.
4. ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂಖ್ಯೆ: ಪ್ರಇ 243 ಪ್ರವಾಯೋ 2016 ದಿನಾಂಕ: 8-9-2016ಕ್ಕೆ ಅನುಬಂಧ.**

**2016-17ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ವಿತರಿಸುವ ಸಂಬಂಧ ತಯಾರಿಸಿರುವ ಮಾರ್ಗಸೂಚಿಗಳು.**

ಯೋಜನೆ.

- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಲಘು ವಾಹನ ಚಾಲನಾ ಪರವಾನಗಿ ಹೊಂದಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಅರ್ಹ ನಿರುದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳುವ ದೃಷ್ಟಿಯಿಂದ ಪ್ರವಾಸಿ ತಾಣಗಳಿಗೆ ಪ್ರವಾಸಿಗರನ್ನು ಕರೆದುಕೊಂಡು ಹೋಗಲು ಸಹಾಯಧನದ ಮೂಲಕ ಪ್ರವಾಸಿ ಟ್ಯಾಕ್ಸಿಗಳನ್ನು ಒದಗಿಸುವುದು.

ಯೋಜನೆಯ ಘಟಕ ವೆಚ್ಚ.

ಫಲಾನುಭವಿಯು ಸ್ವ-ಇಚ್ಛೆಯಿಂದ ಯಾವುದೇ ಮಾದರಿಯ ವಾಹನವನ್ನು ಖರೀದಿಸಬಹುದು. ಈ ವಾಹನದ ಘಟಕ ವೆಚ್ಚದ ವಿವರವು ಕೆಳಕಂಡಂತಿದೆ.

- ಇಲಾಖೆಯ ಸಹಾಯಧನ ರೂ.[illegible] ಲಕ್ಷಗಳು ಮಾತ್ರ.
- ಫಲಾನುಭವಿಯ ವಂತಿಗೆ - ವಾಹನದ ಒಟ್ಟು ವೆಚ್ಚದ ಶೇ.[illegible] ರಷ್ಟು.
- ಬ್ಯಾಂಕ್ ಸಾಲ - ವಾಹನದ ಒಟ್ಟು ವೆಚ್ಚದಲ್ಲಿ ಉಳಿದ ಮೊತ್ತ.

ಜಿಲ್ಲಾವಾರು ಗುರಿ :

ಇಲಾಖೆಯಿಂದ ಪ್ರತಿ ಜಿಲ್ಲೆಗೆ ನಿಗಧಿಪಡಿಸಿದ ಅಭ್ಯರ್ಥಿಗಳ ಗುರಿಯನ್ನು ಜಿಲ್ಲಾಧಿಕಾರಿಗಳು ಆಯಾ ಜಿಲ್ಲೆಯ ತಾಲ್ಲೂಕುವಾರು ಜನಸಂಖ್ಯೆಗೆ ಅನುಗುಣವಾಗಿ ನಿಗಧಿಪಡಿಸುವುದು. ಈ ಗುರಿಯನ್ನು ಜಿಲ್ಲೆಯಲ್ಲಿರುವ ಲೀಡ್ ಬ್ಯಾಂಕ್/ಡಿಎಲ್‌ಸಿಸಿಗೆ ರವಾನಿಸಿ ಬ್ಯಾಂಕ್ ಸಾಲ ಮಂಜೂರು ಮಾಡಲು ಕ್ರಮ ವಹಿಸುವುದು.

ಪ್ರವಾಸಿ ಟ್ಯಾಕ್ಸಿ ವಿತರಣೆ ಪ್ರಕ್ರಿಯೆ ಕಾಲಾವಧಿ :

| ಕ್ರ.ಸಂ | ಪ್ರಕ್ರಿಯೆ | ದಿನಾಂಕ |
|---|---|---|
| 1 | ಅರ್ಜಿ ಆಹ್ವಾನಿಸಲು ಪತ್ರಿಕಾ ಪ್ರಕಟಣೆ ಹೊರಡಿಸುವುದು | |
| 2 | ಅರ್ಜಿ ವಿತರಣೆ | |
| 3 | ಅರ್ಜಿ ಸ್ವೀಕರಿಸುವುದು | |
| 4 | ಸ್ವೀಕರಿಸಿದ ಅರ್ಜಿಗಳ ಪರಿಶೀಲನೆ | |
| 5 | ಪರಿಶೀಲಿಸಿದ ಅರ್ಜಿಗಳ ಪಟ್ಟಿಯನ್ನು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆ ಕರೆದು ಸಮಿತಿಯ ಮುಂದೆ ಮಂಡಿಸಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು | ಪ್ರವಾಸೋದ್ಯಮ ನಿರ್ದೇಶಕರು ನಿರ್ಧರಿಸುವುದು. |
| 6 | ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ಹಾಗೂ ಆಕ್ಷೇಪಣೆ ಆಹ್ವಾನ | |
| 7 | ಸ್ವೀಕರಿಸಿದ ಆಕ್ಷೇಪಣೆಗಳ ಇತ್ಯರ್ಥಪಡಿಸುವುದು | |

.....2

| ಕ್ರ.ಸಂ | ಪ್ರಕ್ರಿಯೆ | ದಿನಾಂಕ |
|---|---|---|
| 8 | ಅಂತಿಮ ಫಲಾನುಭವಿಗಳ ಆಯ್ಕೆ ಪಟ್ಟಿ ಪ್ರಕಟಣೆ | |
| 9 | ಫಲಾನುಭವಿಗಳ ಪಟ್ಟಿಯನ್ನು ಬ್ಯಾಂಕ್ ಸಾಲ ಒದಗಿಸಲು ಬ್ಯಾಂಕ್‌ಗೆ ಸಲ್ಲಿಸುವುದು | |
| 10 | ಬ್ಯಾಂಕ್ ಸಾಲ ಮಂಜೂರಾದ ನಂತರ ಸಹಾಯಧನವನ್ನು ಬ್ಯಾಂಕ್‌ಗೆ ಜಮಾ ಮಾಡುವುದು | ವ್ಯವಸ್ಥಾಪಕ ನಿರ್ದೇಶಕರು ನಿರ್ಧರಿಸುವುದು |
| 11 | ಪ್ರವಾಸಿ ಟ್ಯಾಕ್ಸಿ ವಿತರಣೆ | |
| 12 | ಪ್ರವಾಸಿ ಟ್ಯಾಕ್ಸಿ ವಿತರಣೆ ಮಾಡಿರುವ ಬಗ್ಗೆ ಇಲಾಖೆಗೆ ವರದಿ ಸಲ್ಲಿಸಲು ಕೊನೆಯ ದಿನ | |

ಆಯ್ಕೆ ಸಮಿತಿ :

ಫಲಾನುಭವಿಗಳ ಅರ್ಹತಾ ಪಟ್ಟಿ ಆಯ್ಕೆ ಮಾಡುವ ಸಮಿತಿ

ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಆಯ್ಕೆ ಮಾಡುವುದು

1. ಉಪ ವಿಭಾಗಾಧಿಕಾರಿಗಳು - ಅಧ್ಯಕ್ಷರು
2. ತಹಶೀಲ್ದಾರ್ (ಆಯಾ ಜಿಲ್ಲಾ ಕೇಂದ್ರ ಸ್ಥಾನದಲ್ಲಿರುವವರು)
3. ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು - ಸದಸ್ಯ ಕಾರ್ಯದರ್ಶಿಗಳು.
4. ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಪ್ರತಿನಿಧಿ - ಸದಸ್ಯರು
5. ಜಿಲ್ಲಾ ಸಮಗ್ರ ಗಿರಿಜನ ಅಭಿವೃದ್ಧಿ ಅಧಿಕಾರಿ - ಸದಸ್ಯರು
6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ (ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ) - ಸದಸ್ಯರು
7. ಪ್ರಾದೇಶಿಕ ಸಾರಿಗೆ ಅಧಿಕಾರಿ - ಸದಸ್ಯರು
8. ವ್ಯವಸ್ಥಾಪಕರು ಲೀಡ್ ಬ್ಯಾಂಕ್ - ಸದಸ್ಯರು.
9. ಡಾ. ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧಿಕಾರಿ - ಸದಸ್ಯರು
10. ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮದ ಅಧಿಕಾರಿ - ಸದಸ್ಯರು.

ಆಯ್ಕೆ ವಿಧಾನ:

- ಫಲಾನುಭವಿಗಳ ಆಯ್ಕೆಯಲ್ಲಿ ಅಭ್ಯರ್ಥಿಯ ವಯಸ್ಸು ಹಾಗೂ ಎಸ್ ಎಸ್ ಎಲ್ ಸಿ ಪರೀಕ್ಷೆ ಅಂಕದ ಶೇಕಡ (%) ಎರಡರ ಆಧಾರದ ಮೇಲೆ ಕ್ರಮವಾಗಿ 60 ಮತ್ತು 40 ಆದ್ಯತೆಯನ್ನು ನೀಡಿ ಈ ಕೆಳಕಂಡ ಮಾನದಂಡಗಳ ಮೂಲಕ ಆಯ್ಕೆ ಮಾಡುವುದು.

1. ಅಭ್ಯರ್ಥಿಯ ವಯಸ್ಸಿನ ಜ್ಯೇಷ್ಠತೆ ಮೇರೆಗೆ -

ಸೂತ್ರ : ಅಭ್ಯರ್ಥಿ ವಯಸ್ಸು x 100

ನಿಗದಿಪಡಿಸಿದ ವಯಸ್ಸು [illegible]

= ಪ್ರಮಾಣ ಫಲಿತಾಂಶ x 60 = ಅಭ್ಯರ್ಥಿಯ ವಯಸ್ಸಿನ ಜ್ಯೇಷ್ಠತೆ ಮೇರೆಗೆ ಪಡೆದ ಫಲಿತಾಂಶ

100

[A]

2. ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಠತ ಮೇರೆಗೆ :-

ಸೂತ್ರ = ಎಸ್.ಎಸ್.ಎಲ್.ಸಿ ಯಲ್ಲಿ ಅಭ್ಯರ್ಥಿಯು ಪಡೆದ ಒಟ್ಟು ಅಂಕಗಳ ಶೇಕಡ x 100 / ನಿಗಧಿಪಡಿಸಿರುವ ಅಂಕದ ಮಿತಿ [45%]

= ಬರುವ ಫಲಿತಾಂಶ x 40 / 100 = ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ [B]

ಅಭ್ಯರ್ಥಿಯ ವಯಸ್ಸಿನ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ[A] + ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ [B]

= ಅಭ್ಯರ್ಥಿ ಪಡೆಯುವ ಒಟ್ಟು ಶೇಕಡವಾರು ಫಲಿತಾಂಶ.

ಅಭ್ಯರ್ಥಿಯು ಪಡೆಯುವ ಒಟ್ಟು ಶೇಕಡವಾರು ಫಲಿತಾಂಶದ ಏರಿಕೆಯಿಂದ ಇಳಿಕೆ ಕ್ರಮದಲ್ಲಿ [Descending Order] ಬರುವ ಶೇಕಡವಾರು ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು

3 ಮಹಿಳೆಯರಿಗೆ ಶೇ. 10% ರಷ್ಟು ಗುರಿಗಳನ್ನು ಮೀಸಲಿರಿಸುವುದು. ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸದೇ ಇದ್ದಲ್ಲಿ, ಪುರುಷ ಅಭ್ಯರ್ಥಿಗಳಿಗೆ ಸದರಿ ಗುರಿಗಳನ್ನು ಹಂಚಿಕೆ ಮಾಡತಕ್ಕದ್ದು.

ಫಲಾನುಭವಿಗಳ ಆಯ್ಕೆಯಲ್ಲಿ ಆದ್ಯತೆ ನೀಡಬೇಕಾದ ಅಂಶಗಳು:

- ನಿಯಮ ರೀತ್ಯ ಮಹಿಳೆಯರು ಅರ್ಜಿ ಸಲ್ಲಿಸಿದ್ದಲ್ಲಿ ಆದ್ಯತೆ ನೀಡಬಹುದಾಗಿದೆ
- ಬಿ.ಪಿ.ಎಲ್. ರೇಖೆಗಿಂತ ಕೆಳಗಿರುವವರಿಗೆ ಆದ್ಯತೆ ನೀಡತಕ್ಕದ್ದು.
- ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರಿ ಹೊಂದಿಲ್ಲದೆ ಇರುವುದನ್ನು ಖಚಿತಪಡಿಸಿಕೊಳ್ಳಬೇಕು.
- ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದಾಗಿದೆ.

ವಾಹನ ಸಾಲ ಮೇಳ:

- ಪ್ರವಾಸಿ ಟ್ಯಾಕ್ಸಿ ಖರೀದಿಸಲು ಎಲ್ಲಾ ಜಿಲ್ಲೆಯಲ್ಲಿಯೂ ಫಲಾನುಭವಿಗಳಿಗೆ ಸೂಕ್ತವಾದ ಬ್ಯಾಂಕ್ ಸಾಲ ದೊರಕುವಂತೆ ಮಾಡಲು ಲೀಡ್ ಬ್ಯಾಂಕ್ ವ್ಯವಸ್ಥಾಪಕರೊಂದಿಗೆ ಹಾಗೂ ವಿವಿಧ ವಾಹನ ಏಜೆನ್ಸಿಯವರೊಂದಿಗೆ ವಾಹನ ಸಾಲ ಮೇಳ ಜರುಗಿಸಿ ಸ್ಥಳದಲ್ಲಿ ಸಾಲ ಮಂಜೂರಿಸಿದ ಬ್ಯಾಂಕ್‌ಗಳಿಗೆ ಮಂಜೂರಾತಿ ಅನುಪಾತಕ್ಕೆ ಅನುಗುಣವಾಗಿ ಸಹಾಯಧನ ವಿತರಿಸುವುದು.

**ಅರ್ಜಿದಾರರು ಹೊಂದಿರಬೇಕಾದ ಅರ್ಹತೆಗಳು**

ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ಖರೀದಿಸುವ ಯೋಜನೆಯ ಪ್ರಯೋಜನ ಪಡೆಯಲು ಅರ್ಜಿ ಸಲ್ಲಿಸಲು ಅರ್ಜಿದಾರರು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

ಅ) ಅರ್ಜಿದಾರರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.

ಆ) ಅರ್ಜಿದಾರರ ವಯಸ್ಸು 20 ರಿಂದ 40 ವರ್ಷದೊಳಗಿರಬೇಕು.

ಇ) ಅರ್ಜಿದಾರರು 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

ಈ) ಅಭ್ಯರ್ಥಿಗಳು ಲಘು ವಾಹನ ಚಾಲನಾ ಪರವಾನಗಿ ಪಡೆದು ಕನಿಷ್ಠ ಒಂದು ವರ್ಷವಾಗಿರಬೇಕು. ಅಭ್ಯರ್ಥಿಗಳು ವಾಹನ ಪರವಾನಗಿಯೊಂದಿಗೆ ಬ್ಯಾಡ್ಜ್ ಹೊಂದಿರತಕ್ಕದ್ದು.

ಉ) ನಗರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.2.00 ಲಕ್ಷ ಮೀರಬಾರದು.

ಊ) ಗ್ರಾಮಾಂತರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.1.50 ಲಕ್ಷ ಮೀರಬಾರದು

ಋ) ಅರ್ಜಿದಾರರು ಯಾವ ಜಿಲ್ಲೆಯ ನಿವಾಸಿಯಾಗಿರುತ್ತಾರೋ ಅದೇ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಬೇಕು.

ಎ) ಅರ್ಜಿದಾರರು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರಬಾರದು

ಏ) ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದಾಗಿದೆ.

**ಅರ್ಜಿದಾರರು ಸಲ್ಲಿಸಬೇಕಾದ ದಾಖಲೆಗಳು :**

ಅ) ಜಿಲ್ಲಾಧಿಕಾರಿಗಳಿಂದ ಜಾಹೀರಾತು ಪ್ರಕಟವಾದ 30 ದಿನಗಳ ಒಳಗಾಗಿ ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಇತ್ತೀಚಿನ ಭಾವಚಿತ್ರದೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸಬೇಕು

ಆ) ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡ್‌ನ ಪ್ರತಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ

ಇ) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿರುವ ಬಗ್ಗೆ ತಹಶೀಲ್ದಾರ್‌ರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರದ ಪ್ರತಿ.

ಈ) ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಆದಾಯದ ಪ್ರಮಾಣ ಪತ್ರದ ಪ್ರತಿ

ಉ) ತಹಶೀಲ್ದಾರ್/ಮಹಾನಗರ ಪಾಲಿಕೆ/ನಗರ ಪಾಲಿಕೆ/ನಗರಸಭೆ/ಪುರಸಭೆ/ಗ್ರಾಮ ಪಂಚಾಯ್ತಿ/ಪಟ್ಟಣ ಪಂಚಾಯ್ತಿಗಳಿಂದ ಪಡೆದಿರುವ ವಾಸಸ್ಥಳ ದೃಢೀಕರಣ ಪತ್ರದ ಪ್ರತಿ.

ಊ) ಖಾಯಂ ಲಘು ವಾಹನ ಚಾಲನಾ ಪರವಾನಗಿ ಪತ್ರ ಹಾಗೂ ಆರ್.ಟಿ.ಓ ರವರಿಂದ ಪಡೆದಿರುವ ಡಿ.ಎಲ್ ಬ್ಯಾಡ್ಜ್‌ಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

ಋ) ವಿದ್ಯಾರ್ಹತೆಯ ಬಗ್ಗೆ ಕನಿಷ್ಠ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಯ ಪ್ರತಿ

5...

ಎ) ಅರ್ಜಿದಾರನು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರದ ಬಗ್ಗೆ, ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರಿ ಹೊಂದಿಲ್ಲದ ಬಗ್ಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯ್ತಿ /ಗ್ರಾಮ ಪಂಚಾಯ್ತಿ-ಇವುಗಳಿಂದ ಸ್ವಉದ್ಯೋಗ ಕಲ್ಪಿಸಿಕೊಳ್ಳುವ ಸೌಲಭ್ಯ ಪಡೆಯದೇ ಇರುವ ಬಗ್ಗೆ, ಕುಟುಂಬದ ಯಾವ ಸದಸ್ಯನು ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿಲ್ಲ ಎಂಬ ಬಗ್ಗೆ ಹಾಗೂ ಸ್ವಯಂ ಪ್ರಮಾಣೀಕರಿಸಿ, ರೂ.50/-ರ ಬೆಲೆಯ ಛಾಪಾ ಕಾಗದ (Affidavit)ದಲ್ಲಿ ನಮೂನೆ-3ರಲ್ಲಿ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

ಏ) ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದಾಗಿದ್ದ ಈ ಸಂಬಂಧ ಅಭ್ಯರ್ಥಿಯಿಂದ ಪಡಿತರ ಚೀಟಿಯನ್ನು ಆಧಾರವಾಗಿ ಪಡೆಯತಕ್ಕದ್ದು.

ಐ) ಅರ್ಜಿಯಲ್ಲಿ ಅಭ್ಯರ್ಥಿಗಳ ದೂರವಾಣಿ ಸಂಖ್ಯೆಗಳನ್ನು ನಮೂದಿಸುವುದು ಕಡ್ಡಾಯ.

ಒ) ಆಯ್ಕೆಯಾದ ನಂತರ ಅಭ್ಯರ್ಥಿಗಳ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ಇಲ್ಲದೇ ಇರುವ ಬಗ್ಗೆ ಆಯಾ ವ್ಯಾಪ್ತಿಯ ಪೊಲೀಸ್ ಠಾಣೆಯಿಂದ ಪೊಲೀಸ್ ನಿರಾಕ್ಷೇಪಣಾ ಪತ್ರವನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಪಡೆಯುವುದು.

ಓ) ಅರ್ಜಿದಾರನು ಮೇಲಿನ ಎಲ್ಲಾ ದಾಖಲಾತಿಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು

ಔ) ಆಯ್ಕೆಯಾದ ಅಭ್ಯರ್ಥಿಗಳಿಂದ ತಮಗೆ ವಿತರಿಸುವ ಪ್ರವಾಸಿ ವಾಹನವನ್ನು ಯಾರಿಗೂ ವರ್ಗಾವಣೆ ಮಾಡುವುದಿಲ್ಲವೆಂದು ನೋಟರಿಯಿಂದ ಪ್ರಮಾಣೀಕರಿಸಿ ರೂ.50/-ರ ಬೆಲೆಯ ಛಾಪಾ ಕಾಗದ (Affidavit)ದಲ್ಲಿ ಮುಚ್ಚಳಿಕೆ ಪಡೆಯತಕ್ಕದ್ದು

ಷರತ್ತುಗಳು :

ಅ) ಫಲಾನುಭವಿಯೇ ಸ್ವತಃ ಟ್ಯಾಕ್ಸಿಯನ್ನು ಓಡಿಸಬೇಕು ಹೊರತು ಬೇರೆಯವರಿಗೆ ವರ್ಗಾವಣೆ ಮಾಡುವಂತಿಲ್ಲ. ಒಂದು ವೇಳೆ ವರ್ಗಾವಣೆ ಮಾಡಿರುವುದು ಕಂಡುಬಂದಲ್ಲಿ ಟ್ಯಾಕ್ಸಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ಬಗ್ಗೆ ಜಿಲ್ಲಾಧಿಕಾರಿಗಳು ಆರ್.ಟಿ.ಒ.ಗಳಿಗೆ ಪತ್ರ ಮುಖೇನ ತಿಳಿಸುವುದು. ಸದರಿ ವಾಹನವನ್ನು (05) ವರ್ಷಗಳವರೆಗೆ ಬೇರೆಯವರಿಗೆ ವರ್ಗಾವಣೆ ಮಾಡದಂತೆ ಕ್ರಮವಹಿಸುವುದು.

ಆ) ಪ್ರತಿ ವರ್ಷ ಫಲಾನುಭವಿಯು ಗಳಿಸಿದ ಆದಾಯದ ವಿವರಗಳನ್ನು ಜಿಲ್ಲಾ ಮಟ್ಟದ ಇಲಾಖಾ ಕಛೇರಿಗೆ ನೀಡುವುದು.

ಇ) ಫಲಾನುಭವಿಯು ತೆಗೆದುಕೊಳ್ಳುವ ಬ್ಯಾಂಕಿನ ಸಾಲದ ಮೊತ್ತವನ್ನು ನಿರಂತರವಾಗಿ ಮರುಪಾವತಿ ಮಾಡುವುದು.

6/-

ಈ) ಫಲಾನುಭವಿಗಳಿಗೆ ವಿತರಿಸುವ ಪ್ರವಾಸಿ ಟ್ಯಾಕ್ಸಿಯನ್ನು ಸಾಲ ಮಂಜೂರಾತಿ ಮಾಡಿದ ಬ್ಯಾಂಕ್ ಹೆಸರಿಗೆ ಅಡಮಾನಿಕೆ (Hypothecation) ಮಾಡಿಕೊಳ್ಳತಕ್ಕದ್ದು. ಈ ಬಗ್ಗೆ ಸಂಬಂಧಪಟ್ಟ ಅಧೀನ ಕಛೇರಿಯ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ಅಗತ್ಯ ಕ್ರಮ ವಹಿಸತಕ್ಕದ್ದು.

ಉ) ಫಲಾನುಭವಿಗಳು ಪ್ರವಾಸಿಗರೊಡನೆ ಉತ್ತಮ ನಡವಳಿಕೆಯಿಂದ ವರ್ತಿಸುವುದು. ಕನ್ನಡ ಭಾಷಾ ಜ್ಞಾನ ಹಾಗೂ ಇತರ ಭಾಷೆಗಳ ಪರಿಣತಿ, ಪ್ರವಾಸಿ ಸ್ಥಳಗಳ ಪರಿಚಯ ಮುಂತಾದ ವಿಷಯಗಳ ಬಗ್ಗೆ ಸಾಮಾನ್ಯ ಜ್ಞಾನ ಹೊಂದಿದ್ದರೆ ಅನುಕೂಲವಾಗುವುದು.

ಬ್ರಾಂಡಿಂಗ್:

- ಫಲಾನುಭವಿಯು ಸ್ವ-ಇಚ್ಛೆಯಿಂದ ಯಾವುದೇ ಮಾದರಿಯ ವಾಹನವನ್ನು ಖರೀದಿಸಬಹುದು. ವಾಹನದ ಮೇಲೆ ಪ್ರವಾಸೋದ್ಯಮ ಇಲಾಖೆಯ ಲೋಗೋ "ಪ್ರವಾಸೋದ್ಯಮ ಇಲಾಖೆ ನೆರವು" ಎಂದು ವಾಹನಗಳ ಮೇಲೆ ಬಿತ್ತರಿಸತಕ್ಕದ್ದು ಹಾಗೂ ಬ್ರಾಂಡಿಂಗ್ ಬಗ್ಗೆ ಸರ್ಕಾರ ಮುಂದೆ ಯಾವುದೇ ಆದೇಶ ಹೊರಡಿಸಿದ್ದಲ್ಲಿ ಅದನ್ನು ಪಾಲಿಸತಕ್ಕದ್ದು.

ಅಧೀನ ಕಛೇರಿಗಳ ಜವಾಬ್ದಾರಿಗಳು.

- ಪ್ರವಾಸಿ ಟ್ಯಾಕ್ಸಿ ವಿತರಣೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪ್ರಕ್ರಿಯೆ ಕೈಗೊಂಡ ಬಗ್ಗೆ ಪ್ರತಿ ಮಾಹೆ ನಿಗದಿತ ನಮೂನೆ-1 ರಲ್ಲಿ ಜಿಲ್ಲಾಧಿಕಾರಿಗಳಿಗೆ ಹಾಗೂ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ಕಡ್ಡಾಯವಾಗಿ ಮೂಲಕ ವರದಿ ಸಲ್ಲಿಸುವುದು
- ಆಯ್ಕೆಯಾದ ಫಲಾನುಭವಿಗಳ ಪಟ್ಟಿ (Soft and Hard Copy)ಯನ್ನು ನಿಗದಿತ ನಮೂನೆ-2 ರಲ್ಲಿ ಕೇಂದ್ರ ಕಛೇರಿ ತಪ್ಪದೇ ಸಲ್ಲಿಸುವುದು.

ವಿಶೇಷ ಸೂಚನೆ:

- ಈ ಕಾರ್ಯಕ್ರಮವನ್ನು ನಿಗದಿತ ಸಮಯದಲ್ಲಿ ಅನುಷ್ಠಾನಗೊಳಿಸಿ ಈ ಕಾರ್ಯಕ್ರಮದ ಪ್ರಯೋಜನವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನಾಂಗದವರಿಗೆ ತಲುಪಿಸಲು ನಿರ್ಲಕ್ಷ್ಯ ತೋರಿಸಿದ ಅಧಿಕಾರಿಯು ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013 ರ ಅಧ್ಯಾಯ-IV ಕಂಡಿಕೆ 24 ರ ಅನ್ವಯ ದಂಡನೆಗೆ ಒಳಗಾಗುತ್ತಾರೆ

(ಬಿ.ಎನ್. ಯತಿರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

## ನಮೂನೆ-2

## ಪ್ರವಾಸಿ ಟ್ಯಾಕ್ಸಿ ವಿತರಣೆ ಕಾರ್ಯಕ್ರಮ:

ಜಿಲ್ಲೆಯ ಹೆಸರು:

ವರ್ಷ:

| ಕ್ರ.ಸಂ | ಫಲಾನುಭವಿಯ ಹೆಸರು | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ | ವಿಳಾಸ | ತಾಲ್ಲೂಕು | ಸಹಾಯಧನದ ಮೊತ್ತ | ಆಧಾರ್ ನಂ: | ಮೊಬೈಲ್ ನಂ: |
|---|---|---|---|---|---|---|---|
| 1 | | | | | | | |
| 2 | | | | | | | |
| 3 | | | | | | | |

ದಿನಾಂಕ:

ಅಧಿಕಾರಿಯ ಸಹಿ ಮತ್ತು ಪದನಾಮ

(27)

**ಕರ್ನಾಟಕ ಸರ್ಕಾರ**

ಸಂಖ್ಯೆ: ಪ್ರಇ 47 ಪ್ರವಾಯೋ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:06.02.2017

## ತಿದ್ದುಪಡಿ ಆದೇಶ

2016-17ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ವಿತರಿಸಲು ಮಂಜೂರಾತಿ ನೀಡಿ ಹೊರಡಿಸಿರುವ ಆದೇಶ ಸಂಖ್ಯೆ ಪ್ರಇ 243 ಪ್ರವಾಯೋ 2016, ದಿನಾಂಕ:08.09.2016ರ ಅನುಬಂಧದಲ್ಲಿರುವ ಆಯ್ಕೆ ವಿಧಾನದ ಕ್ರಮ ಸಂಖ್ಯೆ3ರಲ್ಲಿ "ಮಹಿಳೆಯರಿಗೆ ಶೇ.10ರಷ್ಟು ಗುರಿಗಳನ್ನು ಮೀಸಲಿರಿಸುವುದು" ಎಂಬುದರ ಬದಲಿಗೆ "ಮಹಿಳೆಯರಿಗೆ ಶೇ.15ರಷ್ಟು ಗುರಿಗಳನ್ನು ಮೀಸಲಿರಿಸುವುದು" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

6/2/17

([illegible])
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಇವರಿಗೆ,

1. ಮಹಾಲೇಖಪಾಲರು (ಲೆಕ್ಕ ಪತ್ರ /ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
3. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಖನಿಜ ಭವನ, ಬೆಂಗಳೂರು.
4. ಎಲ್ಲಾ ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ.
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಕೆ.ಆರ್.ವೃತ್ತ, ಬೆಂಗಳೂರು-01.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಮಾನ್ಯ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ.
2. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ.

**ಸರ್ಕಾರದ ಆದೇಶ ಸಂಖ್ಯೆ ಪ್ರಇ 297 ಪ್ರವಾಯೋ 2016, ದಿನಾಂಕ:02.11.2016ಕ್ಕೆ**

**ಅನುಬಂಧ-1.**

**2016-17 ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ವಿತರಿಸುವ ಸಂಬಂಧ ಮಾರ್ಗಸೂಚಿಗಳು.**

**ಯೋಜನೆ:**

- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಲಘು ವಾಹನ ಚಾಲನಾ ಪರವಾನಗಿ ಹೊಂದಿರುವ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಅರ್ಹ ನಿರುದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳುವ ದೃಷ್ಟಿಯಿಂದ ಪ್ರವಾಸಿ ತಾಣಗಳಿಗೆ ಪ್ರವಾಸಿಗರನ್ನು ಕರೆದುಕೊಂಡು ಹೋಗಲು ಸಹಾಯಧನದ ಮೂಲಕ ಪ್ರವಾಸಿ ಟ್ಯಾಕ್ಸಿಗಳನ್ನು ಒದಗಿಸುವುದು.

**ಯೋಜನೆಯ ಘಟಕ ವೆಚ್ಚ:**

ಫಲಾನುಭವಿಯು ಸ್ವ-ಇಚ್ಛೆಯಿಂದ ಯಾವುದೇ ಮಾದರಿಯ ವಾಹನವನ್ನು ಖರೀದಿಸಬಹುದು. ಈ ವಾಹನದ ಘಟಕ ವೆಚ್ಚದ ವಿವರವು ಕೆಳಕಂಡಂತಿದೆ.

- ಇಲಾಖೆಯ ಸಹಾಯಧನ – ರೂ.2.00 ಲಕ್ಷಗಳು ಮಾತ್ರ.
- ಫಲಾನುಭವಿಯ ವಂತಿಗೆ – ವಾಹನದ ಒಟ್ಟು ವೆಚ್ಚದ ಶೇ.5 ರಷ್ಟು.
- ಬ್ಯಾಂಕ್ ಸಾಲ - ವಾಹನದ ಒಟ್ಟು ವೆಚ್ಚದಲ್ಲಿ ಉಳಿದ ಮೊತ್ತ.

**ಜಿಲ್ಲಾವಾರು ಗುರಿ :**

ಇಲಾಖೆಯಿಂದ ಪ್ರತಿ ಜಿಲ್ಲೆಗೆ ನಿಗಧಿಪಡಿಸಿದ ಅಭ್ಯರ್ಥಿಗಳ ಗುರಿಯನ್ನು ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯ ತಾಲ್ಲೂಕುವಾರು ಜನಸಂಖ್ಯೆಗೆ ಅನುಗುಣವಾಗಿ ನಿಗಧಿಪಡಿಸುವುದು. ಈ ಗುರಿಯನ್ನು ಜಿಲ್ಲೆಯಲ್ಲಿರುವ ಲೀಡ್ ಬ್ಯಾಂಕ್(ಡಿ.ಎಲ್.ಬಿ.ಸಿ)ಗೆ ರವಾನಿಸಿ ಬ್ಯಾಂಕ್ ಸಾಲ ಮಂಜೂರು ಮಾಡಿಸಲು ಕ್ರಮ ವಹಿಸುವುದು.

**ಪ್ರವಾಸಿ ಟ್ಯಾಕ್ಸಿ ವಿತರಣೆ ಪ್ರಕ್ರಿಯೆ ಕಾಲಾವಧಿ:**

| ಕ್ರ. ಸಂ. | ಪ್ರಕ್ರಿಯೆ | ದಿನಾಂಕ |
|---|---|---|
| 1 | ಅರ್ಜಿ ಆಹ್ವಾನಿಸಲು ಪತ್ರಿಕಾ ಪ್ರಕಟಣೆ ಹೊರಡಿಸುವುದು | ಪ್ರವಾಸೋದ್ಯಮ ನಿರ್ದೇಶಕರು ನಿರ್ಧರಿಸುವುದು. |
| 2 | ಅರ್ಜಿ ವಿತರಣೆ | |
| 3 | ಅರ್ಜಿ ಸ್ವೀಕರಿಸುವುದು | |
| 4 | ಸ್ವೀಕರಿಸಿದ ಅರ್ಜಿಗಳ ಪರಿಶೀಲನೆ | |
| 5 | ಪರಿಶೀಲಿಸಿದ ಅರ್ಜಿಗಳ ಪಟ್ಟಿಯನ್ನು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆ ಕರೆದು ಸಮಿತಿಯ ಮುಂದೆ ಮಂಡಿಸಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು | |
| 6 | ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ಹಾಗೂ ಆಕ್ಷೇಪಣೆ ಆಹ್ವಾನ | |
| 7 | ಸ್ವೀಕರಿಸಿದ ಆಕ್ಷೇಪಣೆಗಳ ಇತ್ಯರ್ಥಪಡಿಸುವುದು. | |

| ಕ್ರ. ಸಂ. | ಪ್ರಕ್ರಿಯೆ | ದಿನಾಂಕ |
|---|---|---|
| 8 | ಅಂತಿಮ ಫಲಾನುಭವಿಗಳ ಆಯ್ಕೆ ಪಟ್ಟಿ ಪ್ರಕಟಣೆ | |
| 9 | ಫಲಾನುಭವಿಗಳ ಪಟ್ಟಿಯನ್ನು ಬ್ಯಾಂಕ್ ಸಾಲ ಒದಗಿಸಲು ಬ್ಯಾಂಕ್‌ಗೆ ಸಲ್ಲಿಸುವುದು | ಪ್ರವಾಸೋದ್ಯಮ ನಿರ್ದೇಶಕರು ನಿರ್ಧರಿಸುವುದು. |
| 10 | ಬ್ಯಾಂಕ್ ಸಾಲ ಮಂಜೂರಾದ ನಂತರ ಇಲಾಖೆಯ ಸಹಾಯಧನವನ್ನು ಬ್ಯಾಂಕ್‌ಗೆ ಜಮಾ ಮಾಡುವುದು. | |
| 11 | ಪ್ರವಾಸಿ ಟ್ಯಾಕ್ಸಿ ವಿತರಣೆ | |
| 12 | ಪ್ರವಾಸಿ ಟ್ಯಾಕ್ಸಿ ವಿತರಣೆ ಮಾಡಿರುವ ಬಗ್ಗೆ ಇಲಾಖೆಗೆ ವರದಿ ಸಲ್ಲಿಸಲು ಕೊನೆಯ ದಿನ | |

**ಆಯ್ಕೆ ಸಮಿತಿ :**

**ಫಲಾನುಭವಿಗಳ ಅರ್ಹತಾ ಪಟ್ಟಿ ಆಯ್ಕೆ ಮಾಡುವ ಸಮಿತಿ:**

ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವುದು:

1. ಉಪ ವಿಭಾಗಾಧಿಕಾರಿಗಳು- ಅಧ್ಯಕ್ಷರು.
2. ತಹಶೀಲ್ದಾರ್ (ಆಯಾ ಜಿಲ್ಲಾ ಕೇಂದ್ರ ಸ್ಥಾನದಲ್ಲಿರುವವರು).
3. ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು-ಸದಸ್ಯ ಕಾರ್ಯದರ್ಶಿಗಳು.
4. ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ಅಧಿಕಾರಿ. -ಸದಸ್ಯರು.
5. ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿ (ಡಿ.ಬಿ.ಸಿ) - ಸದಸ್ಯರು
6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ (ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ)-ಸದಸ್ಯರು.
7. ಪ್ರಾದೇಶಿಕ ಸಾರಿಗೆ ಅಧಿಕಾರಿ - ಸದಸ್ಯರು.
8. ವ್ಯವಸ್ಥಾಪಕರು. ಲೀಡ್ ಬ್ಯಾಂಕ್ - ಸದಸ್ಯರು.

**ಆಯ್ಕೆ ವಿಧಾನ :**

- **ಫಲಾನುಭವಿಗಳ ಆಯ್ಕೆಯಲ್ಲಿ ಅಭ್ಯರ್ಥಿಯ ವಯಸ್ಸು ಹಾಗೂ ಎಸ್.ಎಸ್.ಎಲ್.ಸಿ ಪಡೆದ ಅಂಕದ ಶೇಕಡ (%) ಎರಡರ ಆಧಾರದ ಮೇಲೆ ಕ್ರಮವಾಗಿ 60 ಮತ್ತು 40 ಆದ್ಯತೆಯನ್ನು ನೀಡಿ ಈ ಕೆಳಕಂಡ ಮಾನದಂಡಗಳ ಮೂಲಕ ಆಯ್ಕೆ ಮಾಡುವುದು.**

  1. **ಅಭ್ಯರ್ಥಿಯ ವಯಸ್ಸಿನ ಜೇಷ್ಠತೆ ಮೇರೆಗೆ: -**

ಸೂತ್ರ = $\dfrac{\text{ಅಭ್ಯರ್ಥಿ ವಯಸ್ಸು} \times 100}{\text{ನಿಗದಿಪಡಿಸಿದ ವಯಸ್ಸು (40)}}$

= $\dfrac{\text{ಬರುವ ಫಲಿತಾಂಶ} \times 60}{100}$ = **ಅಭ್ಯರ್ಥಿಯ ವಯಸ್ಸಿನ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ (A)**

.......3

2. ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಠತೆ ಮೇರೆಗೆ:-

ಸೂತ್ರ = $\frac{\text{ಎಸ್.ಎಸ್.ಎಲ್.ಸಿ ಯಲ್ಲಿ ಅಭ್ಯರ್ಥಿಯು ಪಡೆದ ಒಟ್ಟು ಅಂಕಗಳ ಶೇಕಡ} \times 100}{\text{ನಿಗಧಿಪಡಿಸಿರುವ ಅಂಕದ ಮಿತಿ(45\%)}}$

= $\frac{\text{ಬರುವ ಫಲಿತಾಂಶ} \times 40}{100}$ = ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ (B)

ಅಭ್ಯರ್ಥಿಯ ವಯಸ್ಸಿನ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ (A) + ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಠತೆ ಮೇರೆಗೆ ಪಡೆದ ಫಲಿತಾಂಶ (B) = ಅಭ್ಯರ್ಥಿ ಪಡೆಯುವ ಒಟ್ಟು ಶೇಕಡವಾರು ಫಲಿತಾಂಶ.

ಅಭ್ಯರ್ಥಿಯು ಪಡೆಯುವ ಒಟ್ಟು ಶೇಕಡವಾರು ಫಲಿತಾಂಶದ ಏರಿಕೆಯಿಂದ ಇಳಿಕೆ ಕ್ರಮದಲ್ಲಿ (Descending Order) ಬರುವ ಶೇಕಡವಾರು ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು.

3. ಮಹಿಳೆಯರಿಗೆ ಶೇ. 10% ರಷ್ಟು ಗುರಿಗಳನ್ನು ಮೀಸಲಿರಿಸುವುದು. ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸದೇ ಇದ್ದಲ್ಲಿ, ಪುರುಷ ಅಭ್ಯರ್ಥಿಗಳಿಗೆ ಸದರಿ ಗುರಿಗಳನ್ನು ಹಂಚಿಕೆ ಮಾಡತಕ್ಕದ್ದು.

## ಫಲಾನುಭವಿಗಳ ಆಯ್ಕೆಯಲ್ಲಿ ಆದ್ಯತೆ ನೀಡಬೇಕಾದ ಅಂಶಗಳು:

- ನಿಯಮ ರೀತ್ಯ ಮಹಿಳೆಯರು ಅರ್ಜಿ ಸಲ್ಲಿಸಿದ್ದಲ್ಲಿ ಆದ್ಯತೆ ನೀಡಬಹುದಾಗಿದೆ.
- ಬಿ.ಪಿ.ಎಲ್. ರೇಖೆಗಿಂತ ಕೆಳಗಿರುವವರಿಗೆ ಆದ್ಯತೆ ನೀಡತಕ್ಕದ್ದು.
- ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರಿ ಹೊಂದಿಲ್ಲದೆ ಇರುವುದನ್ನು ಖಚಿತಪಡಿಸಿಕೊಳ್ಳಬೇಕು.
- ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದಾಗಿದೆ.

## ವಾಹನ ಸಾಲ ಮೇಳ:

- ಪ್ರವಾಸಿ ಟ್ಯಾಕ್ಸಿ ಖರೀದಿಸಲು ಎಲ್ಲಾ ಜಿಲ್ಲೆಯಲ್ಲಿಯೂ ಫಲಾನುಭವಿಗಳಿಗೆ ಸೂಕ್ತವಾದ ಬ್ಯಾಂಕ್ ಸಾಲ ದೊರಕುವಂತೆ ಮಾಡಲು ಲೀಡ್ ಬ್ಯಾಂಕ್ ವ್ಯವಸ್ಥಾಪಕರೊಂದಿಗೆ ಹಾಗೂ ವಿವಿಧ ವಾಹನ ಏಜೆನ್ಸಿಯವರೊಂದಿಗೆ ವಾಹನ ಸಾಲ ಮೇಳ ಜರುಗಿಸಿ ಸ್ಥಳದಲ್ಲಿ ಸಾಲ ಮಂಜೂರಿಸಿದ ಬ್ಯಾಂಕ್‌ಗಳಿಗೆ ಮಂಜೂರಾತಿ ಅನುಪಾತಕ್ಕೆ ಅನುಗುಣವಾಗಿ ಸಹಾಯಧನ ವಿತರಿಸುವುದು.

## ಅರ್ಜಿದಾರರು ಹೊಂದಿರಬೇಕಾದ ಅರ್ಹತೆಗಳು :

ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ಖರೀದಿಸುವ ಯೋಜನೆಯ ಪ್ರಯೋಜನ ಪಡೆಯಲು ಅರ್ಜಿ ಸಲ್ಲಿಸಲು ಅರ್ಜಿದಾರರ ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

ಅ) ಅರ್ಜಿದಾರರು ಹಿಂದುಳಿದ ಅಥವಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಸೇರಿದವರಾಗಿರಬೇಕು.

ಆ) ಅರ್ಜಿದಾರರ ವಯಸ್ಸು 20 ರಿಂದ 40 ವರ್ಷದೊಳಗಿರಬೇಕು.

ಇ) ಅರ್ಜಿದಾರರು 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

.....4

ಈ) ಅಭ್ಯರ್ಥಿಗಳು ಲಘು ವಾಹನ ಚಾಲನಾ ಪರವಾನಗಿ ಪಡೆದು ಕನಿಷ್ಠ ಒಂದು ವರ್ಷವಾಗಿರಬೇಕು. ಅಭ್ಯರ್ಥಿಗಳು ವಾಹನ ಪರವಾನಗಿಯೊಂದಿಗೆ ಬ್ಯಾಡ್ಜ್‌ನ್ನು ಹೊಂದಿರತಕ್ಕದ್ದು.

ಉ) ನಗರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.55,000/- ಗಳು ಮೀರಬಾರದು.

ಊ) ಗ್ರಾಮಾಂತರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.40,000/-ಗಳು ಮೀರಬಾರದು.

ಋ) ಅರ್ಜಿದಾರರು ಯಾವ ಜಿಲ್ಲೆಯ ನಿವಾಸಿಯಾಗಿರುತ್ತಾರೋ ಅದೇ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಬೇಕು.

ಎ) ಅರ್ಜಿದಾರರು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರಬಾರದು.

ಏ) ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಲಾಗದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ.

## ಅರ್ಜಿದಾರರು ಸಲ್ಲಿಸಬೇಕಾದ ದಾಖಲೆಗಳು :

ಅ) ಜಿಲ್ಲಾಧಿಕಾರಿಗಳಿಂದ ಜಾಹೀರಾತು ಪ್ರಕಟಣೆಗೊಂಡ 30 ದಿನಗಳ ಒಳಗಾಗಿ ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಇತ್ತೀಚಿನ ಭಾವಚಿತ್ರದೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸಬೇಕು.

ಆ) ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡ್‌ನ ಪ್ರತಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಇ) ಹಿಂದುಳಿದ ಅಥವಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರುವ ಬಗ್ಗೆ ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರದ ಪ್ರತಿ.

ಈ) ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಆದಾಯದ ಪ್ರಮಾಣ ಪತ್ರದ ಪ್ರತಿ.

ಉ) ತಹಶೀಲ್ದಾರ್/ ಮಹಾನಗರ ಪಾಲಿಕೆ/ನಗರ ಪಾಲಿಕೆ/ನಗರಸಭೆ/ಪುರಸಭೆ/ಗ್ರಾಮ ಪಂಚಾಯ್ತಿ /ಪಟ್ಟಣ ಪಂಚಾಯ್ತಿ-ಗಳಿಂದ ಪಡೆದಿರುವ ವಾಸಸ್ಥಳ ದೃಢೀಕರಣ ಪತ್ರದ ಪ್ರತಿ.

ಊ) ಖಾಯಂ ಲಘು ವಾಹನ ಚಾಲನಾ ಪರವಾನಗಿ ಪತ್ರ ಹಾಗು ಆರ್.ಟಿ.ಓ. ರವರಿಂದ ಪಡೆದಿರುವ ಡಿ.ಎಲ್ ಎಕ್ಸ್‌ಟ್ರಾಕ್ಟ್‌ಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

ಋ) ವಿದ್ಯಾರ್ಹತೆಯ ಬಗ್ಗೆ ಕನಿಷ್ಠ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಯ ಪ್ರತಿ.

ಎ) ಅರ್ಜಿದಾರರು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರದ ಬಗ್ಗೆ, ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರಿ ಹೊಂದಿಲ್ಲದ ಬಗ್ಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯ್ತಿ /ಗ್ರಾಮ ಪಂಚಾಯ್ತಿ-ಇವುಗಳಿಂದ ಸ್ವಉದ್ಯೋಗ ಕಲ್ಪಿಸಿಕೊಳ್ಳುವ ಸೌಲಭ್ಯ ಪಡೆಯದೇ ಇರುವ ಬಗ್ಗೆ, ಕುಟುಂಬದ ಯಾವ ಸದಸ್ಯರು ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿಲ್ಲ ಎಂಬ ಬಗ್ಗೆ ಹಾಗೂ ಸ್ವಯಂ ಪ್ರಮಾಣೀಕರಿಸಿ, ರೂ.50/-ರ ಬೆಲೆಯ ಛಾಪಾ ಕಾಗದ (Affidavit)ದಲ್ಲಿ ನಮೂನೆ -3 ರಲ್ಲಿ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

ಏ) ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಲಾಗದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಈ ಸಂಬಂಧ ಅಭ್ಯರ್ಥಿಯಿಂದ ಪಡಿತರ ಚೀಟಿಯನ್ನು ಆಧಾರವಾಗಿ ಪಡೆಯತಕ್ಕದ್ದು.

ಐ) ಅರ್ಜಿಯಲ್ಲಿ ಅಭ್ಯರ್ಥಿಗಳ ದೂರವಾಣಿ ಸಂಖ್ಯೆಗಳನ್ನು ನಮೂದಿಸುವುದು ಕಡ್ಡಾಯ.

ಒ) ಆಯ್ಕೆಯಾದ ನಂತರ ಅಭ್ಯರ್ಥಿಗಳ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ಇಲ್ಲದೇ ಇರುವ ಬಗ್ಗೆ ಆಯಾ ವ್ಯಾಪ್ತಿಯ ಪೋಲೀಸ್ ಠಾಣೆಯಿಂದ ಪೋಲೀಸ್ ನಿರಾಕ್ಷೇಪಣಾ ಪತ್ರವನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಪಡೆಯುವುದು.

ಓ) ಅರ್ಜಿದಾರರು ಮೇಲಿನ ಎಲ್ಲಾ ದಾಖಲಾತಿಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

ಔ) ಆಯ್ಕೆಯಾದ ಅಭ್ಯರ್ಥಿಗಳಿಂದ ತಮಗೆ ವಿತರಿಸುವ ಪ್ರವಾಸಿ ವಾಹನವನ್ನು ಯಾರಿಗೂ ಪರಭಾರೆ ಮಾಡುವುದಿಲ್ಲವೆಂದು ನೋಟರಿಯಿಂದ ಪ್ರಮಾಣೀಕರಿಸಿ ರೂ.50/-ರ ಬೆಲೆಯ ಛಾಪಾ ಕಾಗದ (Affidavit)ದಲ್ಲಿ ಮುಚ್ಚಳಿಗೆ ಪಡೆಯತಕ್ಕದ್ದು.

.....5

**ಷರತ್ತುಗಳು :**

ಅ) ಫಲಾನುಭವಿಯೇ ಸ್ವತಃ ಟ್ಯಾಕ್ಸಿಯನ್ನು ಓಡಿಸಬೇಕು ಹೊರತು ಬೇರೆಯವರಿಗೆ ಪರಭಾರೆ ಮಾಡುವಂತಿಲ್ಲ. ಒಂದು ವೇಳೆ ಪರಭಾರೆ ಮಾಡಿರುವುದು ಕಂಡುಬಂದಲ್ಲಿ ಟ್ಯಾಕ್ಸಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ಬಗ್ಗೆ ಜಿಲ್ಲಾಧಿಕಾರಿಗಳು ಆರ್.ಟಿ.ಓ.ಗಳಿಗೆ ಪತ್ರ ಮುಖೇನ ತಿಳಿಸುವುದು. ಸದರಿ ವಾಹನವನ್ನು (05) ವರ್ಷಗಳವರೆಗೆ ಬೇರೆಯವರಿಗೆ ವರ್ಗಾವಣೆ ಮಾಡದಂತೆ ಕ್ರಮವಹಿಸುವುದು.

ಆ) ಪ್ರತಿ ವರ್ಷ ಫಲಾನುಭವಿಯು ಗಳಿಸಿದ ಆದಾಯದ ವಿವರಗಳನ್ನು ಜಿಲ್ಲಾ ಮಟ್ಟದ ಇಲಾಖೆಯ ಕಛೇರಿಗೆ ನೀಡುವುದು.

ಇ) ಫಲಾನುಭವಿಯು ತೆಗೆದುಕೊಳ್ಳುವ ಬ್ಯಾಂಕಿನ ಸಾಲದ ಮೊತ್ತವನ್ನು ನಿರಂತರವಾಗಿ ಮರುಪಾವತಿ ಮಾಡುವುದು.

ಈ) ಫಲಾನುಭವಿಗಳಿಗೆ ವಿತರಿಸುವ ಪ್ರವಾಸಿ ಟ್ಯಾಕ್ಸಿಯನ್ನು ಸಾಲ ಮಂಜೂರಾತಿ ಮಾಡಿದ ಬ್ಯಾಂಕ್ ಹೆಸರಿಗೆ ಅಡಮಾನಿಕೆ (Hypothecation) ಮಾಡಿಕೊಳ್ಳತಕ್ಕದ್ದು. ಈ ಬಗ್ಗೆ ಸಂಬಂಧಪಟ್ಟ ಅಧೀನ ಕಛೇರಿಯ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ಅಗತ್ಯ ಕ್ರಮ ವಹಿಸತಕ್ಕದ್ದು.

ಉ) ಫಲಾನುಭವಿಗಳು ಪ್ರವಾಸಿಗರೊಡನೆ ಉತ್ತಮ ನಡವಳಿಕೆಯಿಂದ ವರ್ತಿಸುವುದು. ಕನ್ನಡ ಭಾಷಾ ಜ್ಞಾನ ಹಾಗೂ ಇತರೆ ಭಾಷೆಗಳ ಪರಿಣತಿ, ಪ್ರವಾಸಿ ಸ್ಥಳಗಳ ಪರಿಚಯ ಮುಂತಾದ ವಿಷಯಗಳ ಬಗ್ಗೆ ಸಾಮಾನ್ಯ ಜ್ಞಾನ ಹೊಂದಿದ್ದರೆ ಅನುಕೂಲವಾಗುವುದು.

**ಬ್ರಾಂಡಿಂಗ್ :**

- ಫಲಾನುಭವಿಯು ಸ್ವ-ಇಚ್ಛೆಯಿಂದ ಯಾವುದೇ ಮಾದರಿಯ ವಾಹನವನ್ನು ಖರೀದಿಸಬಹುದು. ವಾಹನದ ಮೇಲೆ ಪ್ರವಾಸೋದ್ಯಮ ಇಲಾಖೆಯ ಲೋಗೋ, "ಪ್ರವಾಸೋದ್ಯಮ ಇಲಾಖೆ ನೆರವು" ಎಂದು ವಾಹನಗಳ ಮೇಲೆ ಚಿತ್ರಿಸತಕ್ಕದ್ದು ಹಾಗೂ ಬ್ರಾಂಡಿಂಗ್ ಬಗ್ಗೆ ಸರ್ಕಾರ ಮುಂದೆ ಯಾವುದೇ ಆದೇಶ ಹೊರಡಿಸಿದ್ದಲ್ಲಿ ಅದನ್ನು ಪಾಲಿಸತಕ್ಕದ್ದು.

**ಅಧೀನ ಕಛೇರಿಗಳ ಜವಾಬ್ದಾರಿಗಳು :**

- ಪ್ರವಾಸಿ ಟ್ಯಾಕ್ಸಿ ವಿತರಣೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪ್ರಕ್ರಿಯೆ ಕೈಗೊಂಡ ಬಗ್ಗೆ ಪ್ರತಿ ಮಾಹೆ ನಿಗಧಿತ ನಮೂನೆ-1 ರಲ್ಲಿ ಜಿಲ್ಲಾಧಿಕಾರಿಗಳಿಗೆ ಹಾಗೂ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಗೆ ಕಡ್ಡಾಯವಾಗಿ ಮೂಲಕ ವರದಿ ಸಲ್ಲಿಸುವುದು.
- ಆಯ್ಕೆಯಾದ ಫಲಾನುಭವಿಗಳ ಪಟ್ಟಿ (Soft and Hard Copy) ಯನ್ನು ನಿಗಧಿತ ನಮೂನೆ-2 ರಲ್ಲಿ ಕೇಂದ್ರ ಕಛೇರಿ ತಪ್ಪದೇ ಸಲ್ಲಿಸುವುದು.

(ಬಿ.ಎನ್. ಯತಿರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ.

## ವಿಧಾನ ಪರಿಷತ್ತಿನ ಪ್ರಶ್ನೆ ಸಂಖ್ಯೆ: 670 ಕ್ಕೆ ಅನುಬಂಧ-2

### ಕಳೆದ ಮೂರು ವರ್ಷಗಳಲ್ಲಿ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ಪ್ರವಾಸಿ ಟ್ಯಾಕ್ಸಿ ಖರೀದಿಸಲು ಸಹಾಯಧನ ಪಡೆದ ಜಿಲ್ಲಾವಾರು ಮಾಹಿತಿ

| ಕ್ರ. ಸಂ. | ಜಿಲ್ಲೆಯ ಹೆಸರು | ವರ್ಷ | ಪರಿಶಿಷ್ಟ ಜಾತಿ | | | ಪರಿಶಿಷ್ಟ ಪಂಗಡ | | | ಹಿಂದುಳಿದ ಹಾಗೂ ಅಲ್ಪಸಂಖ್ಯಾತರು ವರ್ಗ | | | ಒಟ್ಟು | | |
|---|---|---|---|---|---|---|---|---|---|---|---|---|---|---|
| | | | ಗುರಿ | ಸಾಧನೆ | ಬಾಕಿ | ಗುರಿ | ಸಾಧನೆ | ಬಾಕಿ | ಗುರಿ | ಸಾಧನೆ | ಬಾಕಿ | ಒಟ್ಟು ಗುರಿ | ಒಟ್ಟು ಸಾಧನೆ | ಒಟ್ಟು ಬಾಕಿ |
| 1 | ಬೆಂಗಳೂರು ನಗರ | 2016-17 | 40 | 37 | 3 | 5 | 5 | 0 | 145 | 118 | 27 | 190 | 160 | 30 |
| | | 2017-18 | 26 | 25 | 1 | 6 | 5 | 1 | 51 | 50 | 1 | 83 | 80 | 3 |
| | | 2018-19 | 21 | 18 | 3 | 4 | 4 | 0 | 22 | 15 | 7 | 47 | 37 | 10 |
| | | ಒಟ್ಟು | 87 | 80 | 7 | 15 | 14 | 1 | 218 | 183 | 35 | 320 | 277 | 43 |
| 2 | ಬೆಂಗಳೂರು (ಗ್ರಾ) | 2016-17 | 12 | 11 | 1 | 3 | 3 | 0 | 29 | 22 | 7 | 44 | 36 | 8 |
| | | 2017-18 | 8 | 7 | 1 | 3 | 3 | 0 | 10 | 9 | 1 | 21 | 19 | 2 |
| | | 2018-19 | 6 | 6 | 0 | 2 | 2 | 0 | 4 | 2 | 2 | 12 | 10 | 2 |
| | | ಒಟ್ಟು | 26 | 24 | 2 | 8 | 8 | 0 | 43 | 33 | 10 | 77 | 65 | 12 |
| 3 | ರಾಮನಗರ | 2016-17 | 21 | 21 | 0 | 4 | 4 | 0 | 53 | 53 | 0 | 78 | 78 | 0 |
| | | 2017-18 | 13 | 0 | 13 | 4 | 0 | 4 | 18 | 0 | 18 | 35 | 0 | 35 |
| | | 2018-19 | 11 | 0 | 11 | 4 | 0 | 4 | 8 | 0 | 8 | 23 | 0 | 23 |
| | | ಒಟ್ಟು | 45 | 21 | 24 | 12 | 4 | 8 | 79 | 53 | 26 | 136 | 78 | 58 |
| 4 | ಚಿತ್ರದುರ್ಗ | 2016-17 | 28 | 17 | 11 | 9 | 6 | 3 | 62 | 48 | 14 | 99 | 71 | 28 |
| | | 2017-18 | 18 | 11 | 7 | 10 | 6 | 4 | 22 | 14 | 8 | 50 | 31 | 19 |
| | | 2018-19 | 15 | 0 | 15 | 8 | 0 | 8 | 9 | 0 | 9 | 32 | 0 | 32 |
| | | ಒಟ್ಟು | 61.00 | 28.00 | 33.00 | 27.00 | 12.00 | 15.00 | 93.00 | 62.00 | 31.00 | 181.00 | 102.00 | 79.00 |
| 5 | ದಾವಣಗೆರೆ | 2016-17 | 22 | 14 | 8 | 7 | 4 | 3 | 51 | 39 | 12 | 80 | 57 | 23 |
| | | 2017-18 | 14 | 4 | 10 | 7 | 4 | 3 | 18 | 11 | 7 | 39 | 19 | 20 |
| | | 2018-19 | 11 | 0 | 11 | 5 | 0 | 5 | 8 | 0 | 8 | 24 | 0 | 24 |
| | | ಒಟ್ಟು | 47.00 | 18.00 | 29.00 | 19.00 | 8.00 | 11.00 | 77.00 | 50.00 | 27.00 | 143.00 | 76.00 | 67.00 |
| 6 | ಕೋಲಾರ | 2016-17 | 28 | 28 | 0 | 5 | 5 | 0 | 57 | 30 | 27 | 90 | 63 | 27 |
| | | 2017-18 | 18 | 14 | 4 | 5 | 4 | 1 | 20 | 20 | 0 | 43 | 38 | 5 |
| | | 2018-19 | 14 | 10 | 4 | 4 | 3 | 1 | 9 | 8 | 1 | 27 | 21 | 6 |
| | | ಒಟ್ಟು | 60.00 | 52.00 | 8.00 | 14.00 | 12.00 | 2.00 | 86.00 | 58.00 | 28.00 | 160.00 | 122.00 | 38.00 |
| 7 | ಚಿಕ್ಕಬಳ್ಳಾಪುರ | 2016-17 | 28 | 23 | 5 | 7 | 7 | 0 | 64 | 51 | 13 | 99 | 81 | 18 |
| | | 2017-18 | 18 | 11 | 7 | 8 | 6 | 2 | 22 | 20 | 2 | 48 | 37 | 11 |
| | | 2018-19 | 14 | 0 | 14 | 6 | 0 | 6 | 10 | 0 | 10 | 30 | 0 | 30 |
| | | ಒಟ್ಟು | 60.00 | 34.00 | 26.00 | 21.00 | 13.00 | 8.00 | 96.00 | 71.00 | 25.00 | 177.00 | 118.00 | 59.00 |
| 8 | ಶಿವಮೊಗ್ಗ | 2016-17 | 29 | 27 | 2 | 6 | 6 | 0 | 75 | 72 | 3 | 110 | 105 | 5 |
| | | 2017-18 | 19 | 19 | 0 | 7 | 7 | 0 | 26 | 26 | 0 | 52 | 52 | 0 |
| | | 2018-19 | 15 | 9 | 6 | 5 | 5 | 0 | 11 | 11 | 0 | 31 | 25 | 6 |
| | | ಒಟ್ಟು | 63 | 55 | 8 | 18 | 18 | 0 | 112 | 109 | 3 | 193 | 182 | 11 |
| 9 | ತುಮಕೂರು | 2016-17 | 44 | 44 | 0 | 11 | 11 | 0 | 111 | 111 | 0 | 166 | 166 | 0 |
| | | 2017-18 | 29 | 29 | 0 | 11 | 11 | 0 | 39 | 39 | 0 | 79 | 79 | 0 |
| | | 2018-19 | 23 | 0 | 23 | 9 | 0 | 9 | 17 | 0 | 17 | 49 | 0 | 49 |
| | | ಒಟ್ಟು | 96.00 | 73.00 | 23.00 | 31.00 | 22.00 | 9.00 | 167.00 | 150.00 | 17.00 | 294.00 | 245.00 | 49.00 |
| 10 | ಮಂಡ್ಯ | 2016-17 | 31 | 25 | 6 | 6 | 4 | 2 | 86 | 55 | 31 | 123 | 84 | 39 |
| | | 2017-18 | 20 | 19 | 1 | 7 | 6 | 1 | 30 | 22 | 8 | 57 | 47 | 10 |
| | | 2018-19 | 16 | 4 | 12 | 5 | 4 | 1 | 13 | 9 | 4 | 34 | 17 | 17 |
| | | ಒಟ್ಟು | 67.00 | 48.00 | 19.00 | 18.00 | 14.00 | 4.00 | 129.00 | 86.00 | 43.00 | 214.00 | 148.00 | 66.00 |

| ಕ್ರ. ಸಂ. | ಜಿಲ್ಲೆಯ ಹೆಸರು | ವರ್ಷ | ಪರಿಶಿಷ್ಟ ಜಾತಿ | | | ಪರಿಶಿಷ್ಟ ಪಂಗಡ | | | ಹಿಂದುಳಿದ ಹಾಗೂ ಅಲ್ಪಸಂಖ್ಯಾತರು ವರ್ಗ | | | ಒಟ್ಟು | | |
|---|---|---|---|---|---|---|---|---|---|---|---|---|---|---|
| | | | ಗುರಿ | ಸಾಧನೆ | ಬಾಕಿ | ಗುರಿ | ಸಾಧನೆ | ಬಾಕಿ | ಗುರಿ | ಸಾಧನೆ | ಬಾಕಿ | ಒಟ್ಟು ಗುರಿ | ಒಟ್ಟು ಸಾಧನೆ | ಒಟ್ಟು ಬಾಕಿ |
| 11 | ಚಿಕ್ಕಮಗಳೂರು | 2016-17 | 24 | 24 | 0 | 5 | 5 | 0 | 57 | 57 | 0 | 86 | 86 | 0 |
| | | 2017-18 | 15 | 15 | 0 | 5 | 5 | 0 | 20 | 20 | 0 | 40 | 40 | 0 |
| | | 2018-19 | 12 | 6 | 6 | 4 | 1 | 3 | 9 | 8 | 1 | 25 | 15 | 10 |
| | | ಒಟ್ಟು | 51 | 45 | 6 | 14 | 11 | 3 | 86 | 85 | 1 | 151 | 141 | 10 |
| 12 | ದಕ್ಷಿಣ ಕನ್ನಡ | 2016-17 | 16 | 14 | 2 | 4 | 4 | 0 | 60 | 60 | 0 | 80 | 78 | 2 |
| | | 2017-18 | 11 | 10 | 1 | 5 | 5 | 0 | 21 | 21 | 0 | 37 | 36 | 1 |
| | | 2018-19 | 9 | 7 | 2 | 4 | 2 | 2 | 9 | 8 | 1 | 22 | 17 | 5 |
| | | ಒಟ್ಟು | 36.00 | 31.00 | 5.00 | 13.00 | 11.00 | 2.00 | 90.00 | 89.00 | 1.00 | 139.00 | 131.00 | 8.00 |
| 13 | ಉಡುಪಿ | 2016-17 | 10 | 10 | 0 | 3 | 3 | 0 | 36 | 36 | 0 | 49 | 49 | 0 |
| | | 2017-18 | 6 | 6 | 0 | 3 | 3 | 0 | 13 | 13 | 0 | 22 | 22 | 0 |
| | | 2018-19 | 5 | 4 | 1 | 2 | 2 | 0 | 5 | 5 | 0 | 12 | 11 | 1 |
| | | ಒಟ್ಟು | 21.00 | 20.00 | 1.00 | 8.00 | 8.00 | 0.00 | 54.00 | 54.00 | 0.00 | 83.00 | 82.00 | 1.00 |
| 14 | ಹಾಸನ | 2016-17 | 37 | 29 | 8 | 7 | 1 | 6 | 93 | 55 | 38 | 137 | 85 | 52 |
| | | 2017-18 | 24 | 0 | 24 | 8 | 0 | 8 | 33 | 0 | 33 | 65 | 0 | 65 |
| | | 2018-19 | 19 | 0 | 19 | 6 | 0 | 6 | 14 | 0 | 14 | 39 | 0 | 39 |
| | | ಒಟ್ಟು | 80.00 | 29.00 | 51.00 | 21.00 | 1.00 | 20.00 | 140.00 | 55.00 | 85.00 | 241.00 | 85.00 | 156.00 |
| 15 | ಕೊಡಗು | 2016-17 | 13 | 12 | 1 | 4 | 2 | 2 | 35 | 16 | 19 | 52 | 30 | 22 |
| | | 2017-18 | 8 | 7 | 1 | 4 | 4 | 0 | 12 | 7 | 5 | 24 | 18 | 6 |
| | | 2018-19 | 7 | 0 | 7 | 3 | 0 | 3 | 5 | 0 | 5 | 15 | 0 | 15 |
| | | ಒಟ್ಟು | 28.00 | 19.00 | 9.00 | 11.00 | 6.00 | 5.00 | 52.00 | 23.00 | 29.00 | 91.00 | 48.00 | 43.00 |
| 16 | ಮೈಸೂರು | 2016-17 | 33 | 33 | 0 | 10 | 10 | 0 | 82 | 82 | 0 | 125 | 125 | 0 |
| | | 2017-18 | 22 | 22 | 0 | 10 | 10 | 0 | 29 | 29 | 0 | 61 | 61 | 0 |
| | | 2018-19 | 17 | 0 | 17 | 8 | 0 | 8 | 12 | 0 | 12 | 37 | 0 | 37 |
| | | ಒಟ್ಟು | 72.00 | 55.00 | 17.00 | 28.00 | 20.00 | 8.00 | 123.00 | 111.00 | 12.00 | 223.00 | 186.00 | 37.00 |
| 17 | ಚಾಮರಾಜನಗರ | 2016-17 | 19 | 19 | 0 | 5 | 5 | 0 | 41 | 41 | 0 | 65 | 65 | 0 |
| | | 2017-18 | 12 | 12 | 0 | 5 | 5 | 0 | 14 | 14 | 0 | 31 | 31 | 0 |
| | | 2018-19 | 10 | 10 | 0 | 4 | 4 | 0 | 6 | 6 | 0 | 20 | 20 | 0 |
| | | ಒಟ್ಟು | 41.00 | 41.00 | 0.00 | 14.00 | 14.00 | 0.00 | 61.00 | 61.00 | 0.00 | 116.00 | 116.00 | 0.00 |
| 18 | ಬೆಳಗಾವಿ | 2016-17 | 42 | 42 | 0 | 7 | 5 | 2 | 128 | 128 | 0 | 177 | 175 | 2 |
| | | 2017-18 | 27 | 27 | 0 | 12 | 12 | 0 | 45 | 44 | 1 | 84 | 83 | 1 |
| | | 2018-19 | 22 | 22 | 0 | 9 | 3 | 6 | 19 | 19 | 0 | 50 | 44 | 6 |
| | | ಒಟ್ಟು | 91 | 91 | 0 | 28 | 20 | 8 | 192 | 191 | 1 | 311 | 302 | 9 |
| 19 | ವಿಜಯಪುರ | 2016-17 | 25 | 25 | 0 | 4 | 4 | 0 | 62 | 33 | 29 | 91 | 62 | 29 |
| | | 2017-18 | 17 | 14 | 3 | 4 | 2 | 2 | 22 | 18 | 4 | 43 | 34 | 9 |
| | | 2018-19 | 13 | 0 | 13 | 3 | 0 | 3 | 9 | 0 | 9 | 25 | 0 | 25 |
| | | ಒಟ್ಟು | 55.00 | 39.00 | 16.00 | 11.00 | 6.00 | 5.00 | 93.00 | 51.00 | 42.00 | 159.00 | 96.00 | 63.00 |
| 20 | ಬಾಗಲಕೋಟೆ | 2016-17 | 20 | 19 | 1 | 5 | 1 | 4 | 53 | 52 | 1 | 78 | 72 | 6 |
| | | 2017-18 | 13 | 12 | 1 | 5 | 3 | 2 | 19 | 15 | 4 | 37 | 30 | 7 |
| | | 2018-19 | 11 | 0 | 11 | 4 | 0 | 4 | 8 | 0 | 8 | 23 | 0 | 23 |
| | | ಒಟ್ಟು | 44.00 | 31.00 | 13.00 | 14.00 | 4.00 | 10.00 | 80.00 | 67.00 | 13.00 | 138.00 | 102.00 | 36.00 |
| 21 | ಧಾರವಾಡ | 2016-17 | 14 | 13 | 1 | 4 | 4 | 0 | 49 | 47 | 2 | 67 | 64 | 3 |
| | | 2017-18 | 9 | 9 | 0 | 4 | 4 | 0 | 17 | 17 | 0 | 30 | 30 | 0 |
| | | 2018-19 | 7 | 7 | 0 | 3 | 3 | 0 | 7 | 7 | 0 | 17 | 17 | 0 |
| | | ಒಟ್ಟು | 30.00 | 29.00 | 1.00 | 11.00 | 11.00 | 0.00 | 73.00 | 71.00 | 2.00 | 114.00 | 111.00 | 3.00 |
| | | 2016-17 | 15 | 10 | 5 | 4 | 4 | 0 | 40 | 29 | 11 | 59 | 43 | 16 |

| ಕ್ರ. ಸಂ. | ಜಿಲ್ಲೆಯ ಹೆಸರು | ವರ್ಷ | ಪರಿಶಿಷ್ಟ ಜಾತಿ | | | ಪರಿಶಿಷ್ಟ ಪಂಗಡ | | | ಹಿಂದುಳಿದ ಹಾಗೂ ಅಲ್ಪಸಂಖ್ಯಾತರು ವರ್ಗ | | | ಒಟ್ಟು | | |
|---|---|---|---|---|---|---|---|---|---|---|---|---|---|---|
| | | | ಗುರಿ | ಸಾಧನೆ | ಬಾಕಿ | ಗುರಿ | ಸಾಧನೆ | ಬಾಕಿ | ಗುರಿ | ಸಾಧನೆ | ಬಾಕಿ | ಒಟ್ಟು ಗುರಿ | ಒಟ್ಟು ಸಾಧನೆ | ಒಟ್ಟು ಬಾಕಿ |
| 22 | ಗದಗ | 2017-18 | 10 | 3 | 7 | 4 | 0 | 4 | 14 | 8 | 6 | 28 | 11 | 17 |
| | | 2018-19 | 8 | 0 | 8 | 3 | 0 | 3 | 6 | 0 | 6 | 17 | 0 | 17 |
| | | ಒಟ್ಟು | 33.00 | 13.00 | 20.00 | 11.00 | 4.00 | 7.00 | 60.00 | 37.00 | 23.00 | 104.00 | 54.00 | 50.00 |
| 23 | ಹಾವೇರಿ | 2016-17 | 24 | 17 | 7 | 7 | 4 | 3 | 65 | 57 | 8 | 96 | 78 | 18 |
| | | 2017-18 | 16 | 0 | 16 | 7 | 0 | 7 | 23 | 0 | 23 | 46 | 0 | 46 |
| | | 2018-19 | 12 | 0 | 12 | 6 | 0 | 6 | 10 | 0 | 10 | 28 | 0 | 28 |
| | | ಒಟ್ಟು | 52.00 | 17.00 | 35.00 | 20.00 | 4.00 | 16.00 | 98.00 | 57.00 | 41.00 | 170.00 | 78.00 | 92.00 |
| 24 | ಉತ್ತರ ಕನ್ನಡ | 2016-17 | 32 | 32 | 0 | 8 | 8 | 0 | 94 | 94 | 0 | 134 | 134 | 0 |
| | | 2017-18 | 21 | 21 | 0 | 8 | 8 | 0 | 33 | 33 | 0 | 62 | 62 | 0 |
| | | 2018-19 | 17 | 17 | 0 | 6 | 6 | 0 | 14 | 14 | 0 | 37 | 37 | 0 |
| | | ಒಟ್ಟು | 70.00 | 70.00 | 0.00 | 22.00 | 22.00 | 0.00 | 141.00 | 141.00 | 0.00 | 233.00 | 233.00 | 0.00 |
| 25 | ಬಳ್ಳಾರಿ | 2016-17 | 34 | 20 | 14 | 12 | 8 | 4 | 76 | 52 | 24 | 122 | 80 | 42 |
| | | 2017-18 | 22 | 21 | 1 | 13 | 13 | 0 | 26 | 25 | 1 | 61 | 59 | 2 |
| | | 2018-19 | 18 | 0 | 18 | 10 | 0 | 10 | 11 | 0 | 11 | 39 | 0 | 39 |
| | | ಒಟ್ಟು | 74.00 | 41.00 | 33.00 | 35.00 | 21.00 | 14.00 | 113.00 | 77.00 | 36.00 | 222.00 | 139.00 | 83.00 |
| 26 | ಬೀದರ್ | 2016-17 | 24 | 19 | 5 | 7 | 5 | 2 | 51 | 41.00 | 10.00 | 82 | 65 | 17 |
| | | 2017-18 | 15 | 10 | 5 | 7 | 6 | 1 | 18 | 16.00 | 2.00 | 40 | 32 | 8 |
| | | 2018-19 | 12 | 2 | 10 | 6 | 1 | 5 | 8 | 0.00 | 8.00 | 26 | 3 | 23 |
| | | ಒಟ್ಟು | 51.00 | 31.00 | 20.00 | 20.00 | 12.00 | 8.00 | 77.00 | 57.00 | 20.00 | 148.00 | 100.00 | 48.00 |
| 27 | ಕಲಬುರಗಿ | 2016-17 | 40 | 40 | 0 | 7 | 7 | 0 | 91 | 91 | 0 | 138 | 138 | 0 |
| | | 2017-18 | 116 | 116 | 0 | 17 | 17 | 0 | 32 | 32 | 0 | 165 | 165 | 0 |
| | | 2018-19 | 21 | 21 | 0 | 6 | 6 | 0 | 14 | 14 | 0 | 41 | 41 | 0 |
| | | ಒಟ್ಟು | 177 | 177 | 0 | 30 | 30 | 0 | 137 | 137 | 0 | 344 | 344 | 0 |
| 28 | ಯಾದಗಿರಿ | 2016-17 | 17 | 16 | 1 | 5 | 3 | 2 | 39 | 39 | 0 | 61 | 58 | 3 |
| | | 2017-18 | 13 | 13 | 0 | 15 | 15 | 0 | 13 | 13 | 0 | 41 | 41 | 0 |
| | | 2018-19 | 9 | 9 | 0 | 4 | 4 | 0 | 6 | 6 | 0 | 19 | 19 | 0 |
| | | ಒಟ್ಟು | 39.00 | 38.00 | 1.00 | 24.00 | 22.00 | 2.00 | 58.00 | 58.00 | 0.00 | 121.00 | 118.00 | 3.00 |
| 29 | ರಾಯಚೂರು | 2016-17 | 5 | 0 | 5 | 0 | 0 | 0 | 33 | 0 | 33 | 38 | 0 | 38 |
| | | 2017-18 | 19 | 19 | 0 | 11 | 11 | 0 | 23 | 23 | 0 | 53 | 53 | 0 |
| | | 2018-19 | 15 | 0 | 15 | 9 | 0 | 9 | 10 | 0 | 10 | 34 | 0 | 34 |
| | | ಒಟ್ಟು | 39.00 | 19.00 | 20.00 | 20.00 | 11.00 | 9.00 | 66.00 | 23.00 | 43.00 | 125.00 | 53.00 | 72.00 |
| 30 | ಕೊಪ್ಪಳ | 2016-17 | 19 | 16 | 3 | 6 | 5 | 1 | 48 | 39 | 9 | 73 | 60 | 13 |
| | | 2017-18 | 13 | 13 | 0 | 6 | 6 | 0 | 17 | 16 | 1 | 36 | 35 | 1 |
| | | 2018-19 | 10 | 0 | 10 | 5 | 0 | 5 | 7 | 0 | 7 | 22 | 0 | 22 |
| | | ಒಟ್ಟು | 42.00 | 29.00 | 13.00 | 17.00 | 11.00 | 6.00 | 72.00 | 55.00 | 17.00 | 131.00 | 95.00 | 36.00 |
| | ಗ್ರ್ಯಾಂಡ್ ಟೋಟಲ್ | | 1738.00 | 1298.00 | 440.00 | 555.00 | 374.00 | 181.00 | 2966.00 | 2355.00 | 611.00 | 5259.00 | 4027.00 | 1232.00 |